“ಈಗ್ಬರಾ ಸ್ಟೇಷನ್ ಬೊಬ್ಬಿಲಿನೇ ಅಲ್ಲ?”

“ಅದ್ಯಾವುದು? ಬೊಬ್ಬಿಲಿ ಅಲ್ಲ?”

ಶಿವರಾವ್ ಎದ್ದು ನಿಂತ್ಕೊಂಡ. ಕಾಲುಗಳಲ್ಲಿ ನಡುಕ ಸುರುವಾಯ್ತು. ಎದೆ ಗುಂಡಿಗೆ ಭಾರವಾಯ್ತು. ಮೈಯೆಲ್ಲ ನಿಶ್ಶಕ್ತಿ ಆವರಿಸಿಕೊಂಡಿತು. ಜೋಮು ಹಿಡಿದವನಂತೆ ಸ್ತಬ್ಧವಾಗಿ ನಿಂತುಕೊಂಡ.

ಕತ್ತಲನ್ನು ಸೀಳುತ್ತ ಹೊರಟಿದ್ದ ರೈಲಿನ ವೇಗ ಕಮ್ಮಿಯಾಯಿತು. ಬೋಗಿಯ ಬಾಗಿಲ ಹತ್ತಿರ ನಿಂತುಕೊಂಡ ಶಿವರಾವ್. ಹನಿಗಳು ಮುಖದ ಮೇಲೆ ಬೀಳುತ್ತಿದ್ದವು.

ಫ್ಯಾಕ್ಟರಿ, ಕೋಟಿಕೆರೆ... ಎಲ್ಲ ಹಿಂದೆ ಸರಿದವು. ರೈಲು ಬೊಬ್ಬಿಲಿ ಪ್ಲಾಟ್‌ಫಾರಂ ಮೇಲೆ ನಿಂತಿತು. ಮಳೆಹನಿಗಳು ಮುಖಕ್ಕೆ ಬಡಿಯುತ್ತಿದ್ದರೆ, ಜನರನ್ನು ನೂಕಿಕೊಂಡು ತಡಬಡಿಸುವ ಹೆಜ್ಜೆಗಳೊಂದಿಗೆ ಕೆಳಗಿಳಿದ ಶಿವರಾವ್.

ಹದಿನೈದು ವರ್ಷಗಳ ಹಿಂದೆ–

ಪ್ಲಾಟ್‌ಫಾರಂ ಪೂರ್ತಿ ಮುಚ್ಚಿರುವ ಇವತ್ತಿನ ಈ ಶೆಡ್ ಇರಲಿಲ್ಲ. ಇವತ್ತಿನ ಓವರ್‌ಬ್ರಿಡ್ಜ್ ಇರಲಿಲ್ಲ. ಕಾಲ ಮಾಡಿದ ಬದಲಾವಣೆಗಳನ್ನು ನೋಡಿ ಶಿವರಾವ್‌ನ ಮನಸ್ಸು ಒಂದು ಸಲ ಆಶ್ಚರ್ಯಪಟ್ಟಿತು. ತಾನು ಬೊಬ್ಬಿಲಿಗೇ ಬಂದಿದ್ದಾ? ಎದುರಿಗೆ ತಾಳೆಹಣ್ಣಿನಷ್ಟು ಅಕ್ಷರಗಳಲ್ಲಿ ಇರುವ ಬೋರ್ಡು. ಉಸಿರು ಎಳೆದುಕೊಂಡ.

ಟಿಕೆಟ್ ಕೊಟ್ಟು ಹೊರಬಂದ. ಚಳಿಗಾಳಿ ಬೀಸ್ತಿತ್ತು. ಸಣ್ಣ ಸಣ್ಣ ಹನಿಗಳು ಉದುರುತ್ತಿದ್ದವು. ಗೂಡ್ಸ್ ಷೆಡ್ ಪಕ್ಕದಲ್ಲಿಂದ ನಡೆದ. ಗೂಡ್ಸ್ ಷೆಡ್ ಆ ಕತ್ತಲಲ್ಲಿ ಮುದುರಿಕೊಂಡು ಮಲಗಿದ ಮುದುಕಿಯಂತಿತ್ತು. ಇಷ್ಟವಿಲ್ಲದ ಹಳೆ ದೋಸ್ತನನ್ನು ನೋಡಿದಂತೆ ಕತ್ತಲಲ್ಲಿ ಕರಗಿಹೋಯಿತು.

ಎಂಟು ವರ್ಷ ವಯಸ್ಸಿಗೇ ದಿನಾ ಬರೋನು ಶಿವರಾವು ಇಲ್ಲಿಗೆ. ಕಾವಲಿನವರ ಕಣ್ತಪ್ಪಿಸಿ ಏನೋ ಒಂದು ಕೈಗೆತ್ತಿಕೊಳ್ಳೋನು. ಸಿಕ್ಕಿದ್ದು ಮಾರಿ ಹೋಟೆಲಿಗೆ ಹೋಗೋನು. ಸಿಗರೇಟ್ ಸೇದೋನು. ಒಳ್ಳೇದ್ಯಾವುದೋ ಕೆಟ್ಟದ್ಯಾವುದೋ ತಿಳಿಯದ ದಿನಗಳವು. ಭಗವಂತ ಅನ್ನೋನೊಬ್ಬ ಇದ್ರೆ ತನಗೆ ಬಹಳ ಅನ್ಯಾಯ ಮಾಡಿದ. ಇಲ್ಲದಿದ್ರೆ ತನ್ನ ಬದುಕು ಇವತ್ತು ಹಿಂಗಿರ್ತಿರಲಿಲ್ಲ. ಮೂವತ್ತೈದು ವರ್ಷಕ್ಕೇ ಮತ್ತೊಬ್ಬರನ್ನ ಅವಲಂಬಿಸಿ ಬದುಕುವಂಥ ದಿನ ಸಮೀಪ ಬಂದಾಯ್ತು ಅಂತ ಮನದಟ್ಟಾಗಿಬಿಟ್ಟಿತು ಶಿವರಾವ್‌ಗೆ.

ಹಿಂಗಾಗುತ್ತೆ ಅಂತ ಗೊತ್ತಿದ್ರೆ ತನ್ನ ಬದುಕನ್ನು ಮತ್ತೊಂದು ದಾರಿ ಕಡೆ ತಿರುಗಿಸಿಕೊಳ್ತಿದ್ದನೇನೋ. ಅದಕ್ಕೇ ದೇವರನ್ನ ಬಯ್ತಿರ್ತಾನೆ ಶಿವರಾವು. ಮನುಷ್ಯ ತಪ್ಪು ದಾರಿಯೊಳಗೆ ನಡೀತಿದ್ರೆ ಅವನಿಗೆ ಸರಿ ದಾರಿ ತೋರಿಸಿ ನಡೆಸೋದು ದೇವರ ಜವಾಬ್ದಾರಿ ಅಲ್ಲಾ? ನಿಟ್ಟುಸಿರುಬಿಟ್ಟ ಶಿವರಾವು.

ಹತ್ತು ವರ್ಷ ವಯಸಿಗೇ ಸ್ವಲ್ಪ ಮುನ್ನುಗ್ಗುವ ಗುಣ ರೂಢಿಸಿಕೊಂಡ ಶಿವರಾವು. ಕಳ್ಳತನದಲ್ಲಿ ಕೈ ಪಳಗಿಸಿಕೊಂಡ. ಶಿವರಾವುಗೆ ಒಲಿದ ವಿದ್ಯೆಗಳನ್ನು ನೋಡಿ ಆಶ್ಚರ್ಯಪಡುತಿದ್ದ ಮುದುಕಪ್ಪ. ಶಿವರಾವುಗೆ ಒಳ್ಳೆ ಭವಿಷ್ಯವಿದೆ ಅಂತ ಶಿವರಾವು ಮುಂದೇ ಹೇಳ್ತಿದ್ದ. ಆ ಹಾರೈಕೆ ಶಿವರಾವನೊಳಗಿನ ವಿದ್ಯೆಯನ್ನು ಇನ್ನಷ್ಟು